# ವಿಶ್ವನಂದಿನಿ ಲೇಖನಮಾಲೆ — 67

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಇಪ್ಪತ್ತಾರನೆಯ ಪದ್ಯ

ಹೀಗೆ ಪರಮಾತ್ಮನ ಕುಟುಂಬದ ವೈಭವವನ್ನು ಚಿಂತನೆ ಮಾಡಿದ ದಾಸರು ಪರಮಾತ್ಮನಿಗೆ ಕೇವಲ ಭಕ್ತರನ್ನು ಪೊರೆಯುವದೇ ಪ್ರಧಾನವಾದ ಕೆಲಸ ಎಂದು ಅವನ ಕಾರುಣ್ಯದ ಚಿಂತನೆಯನ್ನು ಮಾಡುತ್ತಾರೆ —

**ಸಾಗರನ ಮಗಳರಿಯದಂತೆ ಸ-**
**ರಾಗದಲಿ ಸಂಚರಿಸುತಿಹ ಉ-**
**ದ್ಯೋಗವೇನು ನಿಮಿತ್ತ ಕಾರಣವಿಲ್ಲ ಲೋಕದಲಿ ।**
**ಭಾಗವತರಾದವರ ಸಲಹುವ-**
**ನಾಗಿ ಸಂಚರಿಸುವುದು ಈ ಭವ-**
**ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತ ॥ ೨೬**

ಲಕ್ಷ್ಮೀದೇವಿ ಅಮೃತಮಥನ ಕಾಲದಲ್ಲಿ ಕ್ಷೀರಸಾಗರದಿಂದ ಒಂದು ರೂಪದಿಂದ

ಪ್ರಾದುರ್ಭವಿಸಿ ಬರುತ್ತಾಳೆ. ಆದ್ದರಿಂದ ಅವಳು ಸಾಗರನ ಅರ್ಥಾತ್ ವರುಣನ ಮಗಳು. ಅವಳು ಅರಿಯದಂತೆ ಅವಳಿಗೆ ಅರಿಯಲಿಕ್ಕಾಗದಂತೆ, ಪರಮಾತ್ಮನ ನಿಖಿಲ ಗುಣಗಳನ್ನು, ನಿಖಿಲ ಕ್ರಿಯೆಗಳನ್ನು ತಿಳಿಯುವ ಸಾಮರ್ಥ್ಯ ಮಹಾಲಕ್ಷ್ಮೀದೇವಿಗಿಲ್ಲ. ಅವಳಿಗೆ ಗೊತ್ತಾಗದಂತೆ ಸಂಚರಿಸುವವನು ಎಂದರೆ ಅವನ ನಿಖಿಲಗುಣಗಳನ್ನೂ ನಿಖಿಲವ್ಯಾಪಾರಗಳನ್ನೂ ಮಹಾಲಕ್ಷ್ಮೀದೇವಿಗೆ ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ ಎಂದಷ್ಟೇ ಅರ್ಥ. ಹೊರತು ಪರಮಾತ್ಮ ಮಹಾಲಕ್ಷ್ಮೀದೇವಿಯನ್ನು ಬಿಟ್ಟು ಸಂಚರಿಸುತ್ತಾನೆ ಎಂದಲ್ಲ. ಪರಮಾತ್ಮನ ನಿಖಿಲರೂಪಗಳೂ ಲಕ್ಷ್ಮೀಯುಕ್ತವಾದವೇ. ಅವಳಿಂದ ವಿಯುಕ್ತವಾದ ರೂಪವಿಲ್ಲ. ಇಂಥಾ ಒಂದು ಪ್ರದೇಶದಲ್ಲಿ, ಇಂಥಾ ಒಂದು ಕಾಲದಲ್ಲಿ ಪರಮಾತ್ಮ ಲಕ್ಷ್ಮೀದೇವಿಯಿಂದ ವಿಯುಕ್ತನಾದ ಎನ್ನುವ ಮಾತೇ ಇಲ್ಲ. ಹೀಗಾಗಿ ಸಾಗರನ ಮಗಳರಿಯದಂತೆ ಸಂಚರಿಸುವವನು ಎಂದರೆ ಲಕ್ಷ್ಮೀಯುಕ್ತನಾಗಿಯೇ ಸಂಚರಿಸಿದರೂ ಪರಮಾತ್ಮನ ನಿಖಿಲವ್ಯಾಪಾರಗಳನ್ನು ತಿಳಿಯುವದು ಮಹಾಲಕ್ಷ್ಮೀದೇವಿಗೆ ಸಾಧ್ಯವಿಲ್ಲ

ಹೀಗೆ ಯಾರ ಅನಂತಜ್ಞಾನದಲ್ಲಿ ಇಡಿಯ ಚರಾಚರಪದಾರ್ಥಗಳ ಜ್ಞಾನ ಒಂದು ಪರಮಾಣುವಿನ ರೂಪವನ್ನು ಪಡೆಯುತ್ತದೆಯೋ ಅಂಥಹವಳಿಗೂ ಪೂರ್ಣವಾಗಿ ತಿಳಿಯಲಿಕ್ಕಾಗದ ಹಾಗೆ ಅದ್ಭುತವಾದ ವ್ಯಾಪಾರಗಳನ್ನು ಮಾಡುವ ಶ್ರೀಹರಿ ಅದಕ್ಕಾಗಿ ಪ್ರಯಾಸಪಡುವದಿಲ್ಲ. ಸರಾಗವಾಗಿ ಸಂಚರಿಸುತಿಹ. ಅತ್ಯಂತ ಲೀಲೆಯಿಂದ ಸಂಚರಿಸುತ್ತಿರುವನು.

ಪರಮಾತ್ಮ ಇಷ್ಟು ಪರಮಾದ್ಭುತವಾಗಿ ಜಗವೆಲ್ಲ ಸಂಚರಿಸುತ್ತಿದ್ದಾನೆ. ಉದ್ಯೋಗವೇನು ? ಏನು ಕೆಲಸ ಅವನಿಗೆ ? ಅವನ ಸಂಚಾರಕ್ಕೆ ನಿಮಿತ್ತವಾದ ಕಾರಣವೇ ಲೋಕದಲ್ಲಿ ಇಲ್ಲ.

ಸಾಮಾನ್ಯರಾದವರಾದರೆ ಹಣದ ಸಂಪಾದನೆಗಾಗಿ ಸಂಚರಿಸುತ್ತಾರೆ. ಸುಖವನ್ನು ಪಡೆಯುವದಕ್ಕಾಗಿ ದೂರದೂರದೂರಿಗೆ ಹೋಗಿ ಬರುತ್ತಾರೆ. ಆದರೆ ನಿತ್ಯತೃಪ್ತನಾದ ಪರಮಾತ್ಮನಿಗೆ ಸುಖದ ಅಪೇಕ್ಷೆ ಎಲ್ಲಿದೆ ? ಸರ್ವವನ್ನೂ ತನ್ನ ಬಳಿಯೇ ಇಟ್ಟುಕೊಂಡ ಅವನು, ಆಪ್ತಕಾಮನಾದ ಅವನು ಹೊಸದಾಗಿ ಏನನ್ನು ಪಡೆಯಬೇಕು ? ಇಲ್ಲ ಪರಮಾತ್ಮನ

ಸಂಚಾರಕ್ಕೆ ಇದ್ಯಾವುದೂ ನಿಮಿತ್ತವಲ್ಲ. ಅವನು ಅವನಿಗಾಗಿ ಸಂಚರಿಸಿದರೆ ಅವನಿಗೆ ಸುಖ ಬೇಕು ಅದಕ್ಕಾಗಿ ಸಂಚರಿಸುತ್ತಾದ್ದಾನೆ ಎನ್ನಬಹುದು. ಆದರೆ ಆ ಭಗವಂತ ನಿತ್ಯತೃಪ್ತ. ಅವನು ತನಗಾಗಿ ಅಲ್ಲ , ತನ್ನ ಭಕ್ತರಿಗಾಗಿ ಸಂಚರಿಸುತ್ತಿದ್ದಾನೆ.

**“ಭಾಗವತರಾದವರ ಸಲಹುವನಾಗಿ ಸಂಚರಿಸುವದು”** ಅವನ ಸಂಚಾರಕ್ಕೆ ನಿಮಿತ್ತವಾದ ಕಾರಣ. ತನ್ನ ಭಕ್ತರಾದ ಜನ ಪೀಡೆಗೊಳಗಾದಾಗ, ತನ್ನನ್ನು ನೋಡಬೇಕು ಎಂದು ಪರಿಪರಿಯಾಗಿ ತಪಿಸುತ್ತಾ ಕುಳಿತಾಗ ಅವರನ್ನು ಸಲಹಲು, ಆ ಪೀಡೆಯಿಂದ ಅವರನ್ನು ಮುಕ್ತಗೊಳಿಸಲು ತನ್ನ ದರ್ಶನದಿಂದ ಅವರಿಗೆ ಸುಖವನ್ನಿತ್ತು ಸಲಹಲು ಪರಮಾತ್ಮ ಸಂಚರಿಸುತ್ತಾನೆ.

ಕನಕದಾಸರೇ ಹೇಳುವ ಹಾಗೆ
**“ಕರಿರಾಜ ಕಷ್ಟದಲಿ ಆದಿಮೂಲಾ ಎಂದು ಕರೆಯಲಾಕ್ಷಣ ಬಂದೊದಗಿದೆಯೋ”**
**“ದೃಢಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸಿ ಸಡಗರದಿ ಕಂಬದಿಂದೊಡೆದೆ ಹರಿಯೇ”**

## "ಯಮಸುತನ ರಾಣಿಗೆ ಅಕ್ಷಯವಸನವನಿತ್ತೆ ಸಮಯದಲಿ ಅಜಾಮಿಳನ ಪೊರೆದೆ"

ಜಗನ್ನಾಥ ದಾಸರು ಹೇಳುವ ಹಾಗೆ **"ಕಣ್ಣಿಗೆವೆಯಂದದಲಿ ಕೈ ಮೈ ತಿಣ್ಣಿಗೊದಗುವ ತೆರದಿ...ಲಕ್ಷ್ಮಣನಣ್ಣನೊದಗುವ ಭಕ್ತರವಸರಕಮರಗಣಸಹಿತ" "ಘನಮಹಿಮ ಗಾಂಗೇಯನುತ ಗಾಯನವ ಕೇಳುತ ಗಗನಚರವಾಹನ ದಿವೌಕಸರೊಡನೆ ತಿರುಗುವ ಮನೆಮನೆಗಳಲ್ಲಿ"**

ಹೀಗೆ ಸಕಲ ಭಾಗವತರನ್ನೂ ಸಲಹುವ ಓ ಅಪ್ರಮೇಯ! ನನ್ನನ್ನೂ ನಿನ್ನ ಭಾಗವತರ ಮಧ್ಯದಲ್ಲಿ ಸೇರಿಸಿ ಈ ಭವಸಾಗರದಲ್ಲಿ ಮುಳುಗಿಸದೆ ರಕ್ಷಿಸು ಅನವರತ ರಕ್ಷಿಸು[1] ॥ ೨೬ ॥

---

[1] ಇದರ ಉಪನ್ಯಾಸ VNU393 ದಲ್ಲಿ "ಸಾಗರನ ಮಗಳರಿಯದಂತೆ ಸರಾಗದಲ್ಲಿ ಸಂಚರಿಸುತಿಹ" "ಕರಿರಾಜ ಕರೆಯಲು ಸಿರಿಗೆ ಹೇಳದೆ ಬಂದೆ" ಇತ್ಯಾದಿ ಮಾತುಗಳನ್ನು ನೋಡಿದಾಗ ಶ್ರೀಹರಿಯೂ ಸಹ ಕ್ಷುದ್ರ ಗಂಡಸರ ಹಾಗೆ ಹೆಂಡತಿಗೆ ತಿಳಿಸದಂತೆ ಓಡಾಡುತ್ತಾನೆ ಮತ್ತು ಲಕ್ಷ್ಮೀದೇವಿಗೆ ತಿಳಿಯದ ಸ್ಥಳಕ್ಕೆ ಹೋಗುತ್ತಾನೆ ಎಂದರೆ ಲಕ್ಷ್ಮೀದೇವಿಯಿಲ್ಲದ ಸ್ಥಳಕ್ಕೆ ಹೋಗುತ್ತಾನೆ ಎಂದಾಗುತ್ತದೆ, ಹೀಗಾಗಿ ದೇವರಿಗೂ ಲಕ್ಷ್ಮೀದೇವಿಯರಿಗೂ ವಿಯೋಗವಿದೆ. ಅಂದಮೇಲೆ ದಾಸಸಾಹಿತ್ಯದ ಈ ವಚನಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬ ಪ್ರಶ್ನೆಗೆ ಈ ಉಪನ್ಯಾಸದಲ್ಲಿ ಉತ್ತರವಿದೆ.

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491